



ಮೂಲ: ಪಾಬ್ಲೊ ನೆರೂದ
ಕನ್ನಡಕ್ಕೆ: ಪದ್ಮರಾಜ ದಂಡಾವತಿ
ಕಲೆ: ವಿಶ್ವನಾಥ್ ಎ.ಎಸ್.

# ನೀವು ನಿಧಾನವಾಗಿ ಸಾಯತೊಡಗುವಿರಿ



ನೀವು ನಿಧಾನವಾಗಿ ಸಾಯತೊಡಗುವಿರಿ
ಲೋಕ ಸುತ್ತದೆ ಇದ್ದರೆ
ಕೋಶ ಓದದೆ ಇದ್ದರೆ
ಬಾಳಿನ ಸದ್ದುಗಳ ಕೇಳದೆ ಇದ್ದರೆ

ನೀವು ನಿಧಾನವಾಗಿ ಸಾಯತೊಡಗುವಿರಿ
ನಿಮ್ಮ ಆತ್ಮಗೌರವವ ನೀವೇ ಕೊಂದು ಹಾಕಿದರೆ
ಅನ್ಯರು ನಿಮಗೆ ಸಹಾಯ ಮಾಡಲು ಬಿಡದೆ ಇದ್ದರೆ

ನೀವು ನಿಧಾನವಾಗಿ ಸಾಯತೊಡಗುವಿರಿ
ನಿಮ್ಮ ಚಟಗಳ ದಾಸರಾದಿರಾದರೆ
ನಡೆದ ಹಾದಿಯಲೇ ನಿತ್ಯವೂ ನಡೆದಿರಾದರೆ
ಜಾಡಿಗೆ ಬೀಳುವ ದಿನಚರಿ ಬದಲಿಸದೆ ಹೋದರೆ
ನಿತ್ಯ ಬೇರೆ ಬೇರೆ ಬಟ್ಟೆಗಳ ಧರಿಸದೆ ಇದ್ದರೆ
ಇಲ್ಲವೇ
ನಿಮಗೆ ಪರಿಚಿತರಲ್ಲದ ಅನ್ಯರ
ಜತೆ ಮಾತನಾಡದೆ ಹೋದರೆ

ನೀವು ನಿಧಾನವಾಗಿ ಸಾಯತೊಡಗುವಿರಿ
ಕಣ್ಣು ಒದ್ದೆ ಮಾಡುವ
ಎದೆ ಬಡಿತ ತೀವ್ರಗೊಳಿಸುವ
ಅನುರಾಗದ ಅನುಭಾವ ತರುವ
ತಲ್ಲಣ ಅನುಭವಿಸುವುದ
ತಪ್ಪಿಸಿಕೊಂಡಿರಾದರೆ

ನೀವು ನಿಧಾನವಾಗಿ ಸಾಯತೊಡಗುವಿರಿ
ಅನಿಶ್ಚಿತ ಬದುಕಿಗೆ ಸುರಕ್ಷಿತ ಎನಿಸುವ
ಅಪಾಯದ ಹಾದಿಯಲಿ ನಡೆಯದೆ ಇದ್ದರೆ
ಬುದ್ಧಿಮಾತಿನ ಸಲಹೆ ಬಿಟ್ಟು
ಜೀವನದಲ್ಲಿ ಒಂದು ಸಾರಿಯಾದರೂ
ಓಡಿ ಹೋಗದೇ ಇದ್ದರೆ!

ನಿಧಾನವಾಗಿ ಸಾಯಲು
ಅವಕಾಶ ಕೊಡಬೇಡಿ
ಸಂತೋಷವಾಗಿ ಇರುವುದ
ಮರೆಯಬೇಡಿ